ಹಿಂದಿನ ತಾವು ಕಳಕೊಂಡ ಗೆಳೆಯನ ಜೊತೆಯೇ ನಿಂತಿದ್ದಾರೆ. ಅವರು ಏನೇ ಬರೆದರೂ ಅಲ್ಲಿಗೇ ಹೋಗಿ ನಿಲ್ಲುತ್ತದೆ. ಮಾದುಪ್ರಸಾದರ ಕಥೆಯ ಕೇತು, ನಾಡೋರ ಅವರ ಪೂರ್ವಿ, ಬೇವಿನಗಿಡದ ಅವರ ಗಜ್ಯಾ, ಇವರೆಲ್ಲಾ ತಾವು ಕಳಕೊಂಡದ್ದು ಮತ್ತು ಕಾಣಬೇಕಿರುವುದರ ಕಡೆ ಹೆಜ್ಜೆ ಹಾಕುತ್ತಿದ್ದಾರೆ.

ಹೀಗೆ ಈ ಶತಮಾನದ ಮೊದಲೆರಡು ದಶಕಗಳಲ್ಲಿ ಮಕ್ಕಳ ಸಾಹಿತ್ಯವು ಮುದ್ರಿತ ಪುಸ್ತಕಗಳ ಸೊಗಸನ್ನು ಹೆಚ್ಚಿಸುತ್ತಲೇ ತಂತ್ರಜ್ಞಾನದ ಸಾಧ್ಯತೆಯನ್ನೂ ತನ್ನೊಳಗೆ ಇರಿಸಿಕೊಂಡು ಇ-ಯುಗದ ಸ್ವರೂಪಕ್ಕೂ ಒಗ್ಗುವ ಹಾಗೆ ಬರಹಗಳು ರಚನೆಗೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆಯೆಂದು ಭಾವಿಸಿರುವೆ.

**◆ ಸುಡುವ ವರ್ತಮಾನದ ಸಂಗತಿಗಳನ್ನು ವರದಿ, ಉಪದೇಶ ಎನ್ನಿಸದ ಹಾಗೆ ಸೃಜನಶೀಲ ಚೌಕಟ್ಟಿಗೆ ತರುವುದು ಸವಾಲಿನ ಕೆಲಸ. ಇದನ್ನು ಹೇಗೆ ನಿಭಾಯಿಸುತ್ತೀರಿ?**

ಲೇಖಕನ ಅನುಭವದ ಮೂಸೆಯಿಂದ ಬಂದ ಬಹುತೇಕ ವಸ್ತುಗಳು ಅವರು ತಮ್ಮೆದುರು ಕಂಡುಂಡ ಸಂಗತಿ, ಸನ್ನಿವೇಶಗಳಿಂದ ಪ್ರೇರಣೆಗೊಂಡವೇ ಆಗಿರುತ್ತವೆ. ಆದರೆ ಹಾಗೆ ಕಂಡ ವಾಸ್ತವಿಕ ಸಂಗತಿಗಳನ್ನೆಲ್ಲಾ ಆರ್ಟಿಸ್ಟಿಕ್ ಫ್ರೇಮ್‌ನೊಳಗೆ ತರದೇ ಕಥೆಕವಿತೆಗಳಾಗಿಸಿದಾಗ, ನೀವು ಹೇಳಿದಂತೆ ಜಡವಾಗುವ ಸಾಧ್ಯತೆ ಇರುತ್ತದೆ. ನಮ್ಮ ಅನುಭವದ ಸಂಗತಿಗಳೇ ಆದರೂ ಲೇಖಕ ಮೊದಲು ಅದನ್ನು ಎದುರಿಗಿನ ವ್ಯಕ್ತಿ, ಸ್ಥಳ, ಸಮಯ, ಪ್ರದೇಶದ, ಚೌಕಟ್ಟಿನ ಮಿತಿಯಿಂದ ಮುಕ್ತಿಗೊಳಿಸಬೇಕು. ಅದು ಏಕಕಾಲದಲ್ಲಿ ವರ್ತಮಾನವೂ ಭವಿಷ್ಯವೂ ಆಗುವ ಸಾಧ್ಯತೆಯನ್ನು ತರಲು ಪ್ರಯತ್ನಿಸಬೇಕು. ಅದರಲ್ಲೂ ಮಕ್ಕಳ ಸಾಹಿತ್ಯ ರಚನೆಯನ್ನು ಮಕ್ಕಳ ಬೆಳವಣಿಗೆಗಾಗಿಯೇ ಇರುವಂಥದು ಎಂದು ಅನೇಕರು ಭಾವಿಸಿರುವುದರಿಂದ- ನೀವು ಹೇಳಿದ ಉಪದೇಶ, ಮೌಲ್ಯಗಳು ಮುನ್ನೆಲೆಗೆ ಬರುತ್ತವೆ. ಹಾಗಾಗಿ ನಾನು ನನ್ನ ಸುತ್ತಲಿನ ವಸ್ತು, ವಿಷಯಗಳನ್ನೇ ಕಥೆಗೆ ಆಯ್ದುಕೊಂಡರೂ, ಅದು ಸೃಜನಶೀಲ ಚೌಕಟ್ಟಿಗೆ ತರುವುದಾದಾಗ ಮಾತ್ರ ಬರೆದಿದ್ದೇನೆ. ಉಳಿದ ಅದೆಷ್ಟೋ ಅನುಭವಗಳು ಇನ್ನೂ ಮನದ ಮರೆಯಲ್ಲಿ ಭದ್ರವಾಗಿವೆ.

**◆ ನಾವೆಲ್ಲ ಬಾಲ್ಯದಲ್ಲಿ ಪತ್ರಿಕಾ ಸಾಹಿತ್ಯವನ್ನು ಓದಿ ಬೆಳೆದವರು. ಸದ್ಯದ ಸಂದರ್ಭದಲ್ಲಿ ಕಥೆ, ಕವಿತೆಗಳಿಗೆ ಪತ್ರಿಕೆಗಳಲ್ಲಿ ಸ್ಪೇಸ್ ಸಿಗುತ್ತಿಲ್ಲ. ಇಂಥ ಸಂದರ್ಭದಲ್ಲಿ ಮಕ್ಕಳ ಸಾಹಿತ್ಯಕ್ಕೆ ನಿರೀಕ್ಷಿತ ಮಟ್ಟದ ಓದುಗ ವರ್ಗ ಕನ್ನಡದಲ್ಲಿದೆಯೇ?**

ಮೊದಲಿನಿಂದಲೂ ಮಕ್ಕಳ ಸಾಹಿತ್ಯಕ್ಕೆ

